ಅಂಗನವಾಡಿಗಳ ಸುವ್ಯವಸ್ಥೆ

533(609) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿ ನಗರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು (ವಿವರ ನೀಡುವುದು) ;

ಆ) ಅಂಗನವಾಡಿಗಳ ಸುವ್ಯವಸ್ಥಿತ ನಿರ್ವಹಣೆಗಾಗಿ ನಿಗದಿ ಪಡಿಸಲ್ಪಟ್ಟ ಸಿಬ್ಬಂದಿ ವರ್ಗದವರ ಅವಶ್ಯಕತೆ ಎಷ್ಟು ಅವುಗಳನ್ನು ಭರ್ತಿಗೊಳಿಸುವ ಬಗ್ಗೆ ಸರ್ಕಾರದ ಕ್ರಮಗಳೇನು; (ಜಿಲ್ಲಾವಾರು ವಿವರ ನೀಡುವುದು);

ಇ) ಎಷ್ಟು ಅಂಗನವಾಡಿ ಕೇಂದ್ರಗಳು ಮೂಲಭೂತ ಸೌಲಭ್ಯ ಗಳಿಂದ ವಂಚಿತವಾಗಿವೆ; (ವಿವರ ನೀಡುವುದು);

ಈ) ಅಂಗನವಾಡಿ ಕೇಂದ್ರಗಳ ಉದ್ದೇಶ ಗುರಿ ಸಾಧನೆಗಳಿಗಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಳಕಪ್ಪ ಜಿ. ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಅಂಗನವಾಡಿ ಕೇಂದ್ರಗಳು – 61187

ಮಿನಿ ಅಂಗನವಾಡಿ ಕೇಂದ್ರಗಳು – 3331

ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಅಂಗನವಾಡಿ ಕೇಂದ್ರದ ಕಾರ್ಯನಿರ್ವಹಣೆಗೆ ಪ್ರತಿ ಅಂಗನವಾಡಿ ಕೇಂದ್ರದಲ್ಲಿ ಒಬ್ಬ ಕಾರ್ಯಕರ್ತೆ ಹಾಗೂ ಒಬ್ಬ ಸಹಾಯಕಿಯ ಹುದ್ದೆಯನ್ನು ಹಾಗೂ ಮಿನಿ ಅಂಗನವಾಡಿ ಕೇಂದ್ರದಲ್ಲಿ ಕಾರ್ಯಕರ್ತೆ ಹುದ್ದೆಯನ್ನು ಮಾತ್ರ ಮಂಜೂರು ಮಾಡಲಾಗಿರುತ್ತದೆ. ಈ ಹುದ್ದೆಗಳನ್ನು ಬರ್ತಿ ಮಾಡಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆ ಸಮಿತಿಯನ್ನು ರಚಿಸಲಾಗಿರುತ್ತದೆ. ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

ಇ) ಕಾರ್ಯನಿರತ ಅಂಗನವಾಡಿ ಕೇಂದ್ರಗಳ ಪೈಕಿ 37088 ಅಂಗನವಾಡಿ ಕೇಂದ್ರಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಉಳಿದ ಕೇಂದ್ರಗಳು ಪಂಚಾಯಿತಿ ಕಟ್ಟಡ, ಶಾಲೆ, ಬಾಡಿಗೆ ಕಟ್ಟಡ, ಸಮುದಾಯ ಭವನ, ಮಹಿಳಾ ಮಂಡಳಿ ಮತ್ತು ಇನ್ನಿತರ ಪರ್ಯಾಯ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿದೆ. ಸ್ವಂತ ಕಟ್ಟಡಗಳಲ್ಲಿ 27365 ಕೇಂದ್ರಗಳು ಹಾಗೂ ಇತರೆ ಕಟ್ಟಡಗಳಲ್ಲಿ 1816 ಕೇಂದ್ರಗಳಲ್ಲಿ ಶೌಚಾಲಯ ಹೊಂದಿರುತ್ತದೆ. ಸ್ವಂತ ಕಟ್ಟಡದಲ್ಲಿ 156623 ಕೇಂದ್ರಗಳಲ್ಲಿ ನೀರಿನ ಸೌಲಭ್ಯ ವಿರುತ್ತದೆ. ಇತರೆ ಕಟ್ಟಡಗಳಲ್ಲಿ 5267 ಕೇಂದ್ರಗಳಲ್ಲಿ ನೀರಿನ ಸೌಲಭ್ಯ ವಿರುತ್ತದೆ. ಉಳಿದ ಕೇಂದ್ರಗಳು ಬೋರ್‌ವೆಲ್ ಮತ್ತು ಇತರೆ ಬಾಹ್ಯಮೂಲದ ನೀರಿನ ಸೌಲಭ್ಯ ಹೊಂದಿರುತ್ತದೆ.

ಈ) ಅಂಗನವಾಡಿ ಕೇಂದ್ರಗಳಿಗೆ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ಕಟ್ಟಡಗಳನ್ನು ಹಂತ ಹಂತವಾಗಿ ಅನುದಾನದ ಲಭ್ಯತೆ ಮತ್ತು ನಿವೇಶನದ ಲಭ್ಯತೆಗನುಗುಣವಾಗಿ ಸರ್ಕಾರದ ಯೋಜನೆಗಳಾದ RIDF, SDP, ಸುವರ್ಣಗ್ರಾಮ ಯೋಜನೆ ಹಾಗೂ ಇನ್ನಿತರೇ ಯೋಜನೆಗಳಡಿ ನಿರ್ಮಿಸಲಾಗುತ್ತಿದೆ ಹಾಗೂ ಶೌಚಾಲಯಗಳಿಲ್ಲದ ಕೇಂದ್ರಗಳಿಗೆ ಸಂಪೂರ್ಣ ಸ್ವಚ್ಛತಾ ಆಂದೋಲನದಡಿ ಶೌಚಾಲಯಗಳನ್ನು ನಿರ್ಮಿಸಲಾಗುತ್ತಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 609 ಕ್ಕೆ ಅನುಬಂಧ

ಕ್ರ.ಸಂ	ಜಿಲ್ಲೆಯ ಹೆಸರು		ಮಂಜೂರಾಗಿರುವ		ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ			ಅಂಗನವಾಡಿ ಸಹಾಯಕಿಯರ ಸಂಖ್ಯೆ		
			ಅಂಗನವಾಡಿ ಕೇಂದ್ರ	ಮಿನಿ ಅಂಗನ ವಾಡಿ ಕೇಂದ್ರ	ಮಂಜೂರಾತಿ	ಕಾರ್ಯ ನಿರತ	ಖಾಲಿ	ಮಂಜೂರಾತಿ	ಕಾರ್ಯನಿರತ	ಖಾಲಿ
1	ಬಾಗಲಕೋಟೆ	2116	2059	57	2116	2072	44	2059	2000	59
2	ಬೆಂಗಳೂರು (ನ)	2097	2006	91	2097	2025	72	2006	1793	213
3	ಬೆಂಗಳೂರು (ಗ್ರಾ)	1209	1088	121	1209	1198	11	1088	1056	32
4	ಬೆಳಗಾಂ	5294	5235	59	5294	5090	204	5235	4919	316
5	ಬಳ್ಳಾರಿ	2314	2266	48	2314	2133	181	2266	2052	214
6	ಬೀದರ್	1890	1863	27	1890	1745	145	1863	1662	201
7	ಬಿಜಾಪುರ	2106	2062	44	2106	2036	70	2062	1860	202
8	ಚಾಮರಾಜನಗರ	1413	1363	50	1413	1347	66	1363	1268	95
9	ಚಿಕ್ಕಬಳ್ಳಾಪುರ	1938	1825	113	1958	1876	62	1825	1727	98
10	ಚಿಕ್ಕಮಗಳೂರು	1821	1663	158	1821	1808	13	1663	1616	47
11	ಚಿತ್ರದುರ್ಗ	2318	2202	116	2318	2305	13	2202	2166	36
12	ದಕ್ಷಿಣ ಕನ್ನಡ	2102	2082	20	2102	2084	18	2082	2065	17
13	ದಾವಣಗೆರೆ	2045	1959	86	2045	2014	31	1959	1923	36
14	ಧಾರವಾಡ	1467	1457	10	1467	1382	85	1457	1338	119
15	ಗದಗ	1106	1102	4	1106	1021	85	1102	998	104
16	ಗುಲ್ಬರ್ಗಾ	3034	2961	73	3034	2934	100	2961	2616	345
17	ಹಾವೇರಿ	1300	1250	50	1300	1272	28	1250	1198	52
18	ಹಾಸನ	2491	2216	275	2491	2439	52	2216	2189	27
19	ಹಾವೇರಿ	1914	1887	27	1914	1702	212	1887	1641	246
20	ಕೊಡಿಕೇರಿ	870	847	23	870	844	26	847	809	38
21	ಕೋಲಾರ	2031	1950	81	2031	1840	191	1950	1712	238
22	ಕೊಪ್ಪಳ	1792	1742	50	1792	1637	155	1742	1536	206
23	ಮಂಡ್ಯ	2526	2220	306	2526	2478	48	2220	2148	72
24	ಮೈಸೂರು	2827	2658	169	2827	2787	40	2658	2570	88

25	ರಾಮನಗರ	1525	1283	242	1525	1502	23	1283	1236	47
26	ರಾಯಚೂರು	2635	2594	41	2635	2598	37	2594	2366	228
27	ಶಿವಮೊಗ್ಗ	2431	2117	314	2431	2338	93	2117	2010	107
28	ತುಮಕೂರು	4081	3562	519	4081	4036	45	3562	3528	34
29	ಉಡುಪಿ	1146	1146	0	1146	1132	14	1146	1117	29
30	ಉತ್ತರಕನ್ನಡ	2679	2522	157	2679	2634	45	2522	2456	66
	ಒಟ್ಟು		61187	3331	64518	62309	2209	61187	57575	3612